**<u>ದಿನಾಂಕ: 02.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**
**<u>ಮುಂದುವರೆದ ಪಾಟೀ ಸವಾಲು: 3 ನೇ ಪ್ರತಿವಾದಿ ಪರ ವಕೀಲರಿಂದ</u>**

1) ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಸಾಕ್ಷಿ ನುಡಿಯುವಂತೆ ಯಾರು ಕರೆದಿರುವುದಿಲ್ಲ. ಈ ಪ್ರಕರಣದಲ್ಲಿ ನಾನು ಪಕ್ಷಗಾರರ ಇರುವುದಿಲ್ಲ. ನನಗೆ 2 ನೇ ವಾದಿ ದಾವೆ ಕುರಿತು ಮಾಹಿತಿ ನೀಡಿ ಕರೆದುಕೊಂಡು ಬಂದಿರುತ್ತಾರೆ. ಪ್ರಕರಣ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ. ನನ್ನ ಮುಖ್ಯ ವಿಚಾರಣೆಯನ್ನು ಇಂಗ್ಲೀಷನಲ್ಲಿ ಬರೆಯಲಾಗಿರುತ್ತದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದ್ದೆ ಅಂತಾ ನನಗೆ ಮಾಹಿತಿ ಇಲ್ಲ. ನನಗೆ ಭೀಮು ಸುಬ್ಬು ಲಮಾಣಿ ಪರಿಚಯ. ನನಗೆ 2 ಮತ್ತು 3 ನೇ ಪ್ರತಿವಾದಿ ಪರಿಚಯ. ಮೃತ ನಾಗೇಶ ಪರಿಚಯ. ನಿಪಿ-22 ರಲ್ಲಿ ಸಾಕ್ಷಿ ಕ್ರಮ.ನಂ.2 ರಲ್ಲಿರುವ ಸಹಿ ನನ್ನದೆ. ನಿಪಿ-22(ಬಿ) ರಲ್ಲಿರುವ ಛಾಯಾ ಚಿತ್ರ 3 ನೇ ಪ್ರತಿವಾದಿಯದು ಎಂದರೆ ಸರಿ. ನಿಪಿ-22(ಎ) ರಲ್ಲಿರುವ ಛಾಯಾ ಚಿತ್ರ ಭೀಮು ಸುಬ್ಬು ಲಮಾಣಿಯವರದು ಎಂದರೆ ಸರಿ. ನಿಪಿ-22 ಕ್ಕೆ ನನ್ನೊಂದಿಗೆ 2 ನೇ ಪ್ರತಿವಾದಿ ಮೃತ ನಾಗೇಶ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಾಗೇಶ 3 ನೇ ವಾದಿಯ ಗಂಡ ಎಂದರೆ ಸರಿ. ಸದರಿ ನಾಗೇಶ ಭೀಮ ಲಮಾಣಿಯವರ ಮಗ ಎಂದರೆ ಸರಿ. 2 ನೇ ಪ್ರತಿವಾದಿ ಭೀಮು ಲಮಾಣಿಯವರು ಮಗಳು ಎಂದರೆ ಸರಿ. ಮೇಲೆ ಹೇಳಿದ ಎಲ್ಲ ಜನ ಸೇರಿ ಖರೀದಿ ಪತ್ರವನ್ನು ಮಾಡಿದ್ದೇವೆ ಎಂದರೆ ಸಾಕ್ಷಿ ಅಡಮಾನ ಪತ್ರ ಇರುತ್ತದೆ ಸಹಿ ಮಾಡು ಅಂತಾ ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆ ಬೆರಳಚ್ಚು ಮಾಡಿದ ನಂತರ ನಾನು ಸಹಿ ಮಾಡಿರುತ್ತೆನೆ ಎಂದರೆ ಸರಿ. ಪ್ರತಿವಾದಿ ನಂ.3 ಮತ್ತು ಭೀಮು ಲಮಾಣಿಯವರು ಸಮಕ್ಷಮ ನಾನು ನಿಪಿ-22 ದಾಖಲೆಗೆ ಸಹಿ ಮಾಡಿರುತ್ತೆನೆ ಎಂದರೆ ಸರಿ. ನಿಪಿ-22 ಉಪನೊಂದಣಾಧಿಕಾರಿ ಕಛೇರಿ

ಬಾಗೇವಾಡಿಯಲ್ಲಿ ನೊಂದಣಿ ಆಗಿರುತ್ತದೆ ಎಂದರೆ ಸರಿ. ನಿಪಿ-22 ರಲ್ಲಿ ಬರೆದ ವಿಷಯಗಳು ನನಗೆ ಮಾಹಿತಿ ಇರುತ್ತದೆ ಎಂದರೆ ಸರಿ. ನಿಪಿ-22 ನ್ನು ನಾನು ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿ. ಬೀಮು ಸುಬ್ಬು ಲಮಾಣಿ 2014 ನೇ ಸಾಲಿನಲ್ಲಿ ನಿಪಿ-22 ದಾಖಲೆ ನೊಂದಣಿ ಕಾಲಕ್ಕೆ ಆರೋಗ್ಯವಾಗಿ ಇದ್ದರು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ವಿಷಯ ನನಗೆ ಮಾಹಿತಿ ಇಲ್ಲದಿದ್ದರೂ ಸಹ ವಾದಿಯರಿಗೆ ಅನುಕುಲ ಮಾಡಲು ಎಂದು ಅದಕ್ಕೆ ಅನುಗುಣವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಮಾತುಕೇಳಿಕೊಂಡು ನಾನು ಅಡಮಾನ ಪತ್ರಕ್ಕೆ ಸಹಿ ಮಾಡಿರುತ್ತೇನೆ

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.